# ಕರ್ನಾಟಕ ಲೋಕಾಯುಕ್ತ

36

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ/1444/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 13.2.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ತಿಪಟೂರು ತಾಲ್ಲೂಕು ಹೊಸಹಳ್ಳಿ ಗ್ರಾಮದ ಖಾನೆಷುಮಾರಿ ನಂ.86/88 ಸ್ವತ್ತನ್ನು ದೂರುದಾರರ ಹೆಸರಿಗೆ ಪೌತಿ ವಾರಸು ಖಾತೆ ಮಾಡಿಕೊಡುವ ಬಗ್ಗೆ.

*******

ಶ್ರೀ ಹೆಚ್.ಎಸ್. ಶಂಕರಲಿಂಗಯ್ಯ, ನಿವೃತ್ತ ಪ್ರಾಂಶುಪಾಲರು, ಗೋವಿನಪುರದ ನಿವಾಸಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ), ಇವರು, ತಮ್ಮ ದೂರಿನಲ್ಲಿ (1) ಶ್ರೀ ಗಂಗಾಧರ ಶೆಟ್ಟಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಾಗೂ (2) ಶೀ ನಾಗರಾಜು ಶೆಟ್ಟಿ, ಸಹಾಯಕ, ರಂಗಾಪುರ ಗ್ರಾಮಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ,(ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತಿಪಟೂರು ತಾಲ್ಲೂಕು ಹೊಸಹಳ್ಳಿ ಗ್ರಾಮದ ಖಾನೆಷುಮಾರಿ ನಂ.86/88 ಸ್ವತ್ತನ್ನು ದೂರುದಾರರ ಹೆಸರಿಗೆ ಪೌತಿ ವಾರಸು ಖಾತೆ ಮಾಡಿಕೊಡಲು ಎದುರುದಾರರಿಗೆ ಅರ್ಜಿ ಸಲ್ಲಿಸಿದರೆ ಅವರು ಅನಾವಶ್ಯಕವಾಗಿ ಖಾತೆ ಮಾಡದೆ ಮುಂದೂಡುತ್ತಾ ಬ್ರಷ್ಟಾಚಾರದಲ್ಲೊಳಗೊಂಡು ಖಾತೆ ಮಾಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ತಮಗೆ ನ್ಯಾಯದೊರಕಿಸಿಕೊಡಬೇಕೆಂದು ದೂರು ಸಲ್ಲಿಸಿದ್ದಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಖಾನೆಷುಮಾರಿ ನಂ.86 ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ದೂರುದಾರರು ನೀಡಿರುವ ದಾಖಲೆಯು ಸರಿಹೊಂದದ ಕಾರಣ ಅವರಿಗೆ ದಿ.25.6.2013ರಂದು ಹಿಂಬರಹ ನೀಡಲಾಗಿರುತ್ತದೆ. ದೂರುದಾರರು ಯಾವುದೇ ನಿಖರವಾದ ದಾಖಲಾತಿಯನ್ನು ನೀಡಿರುವುದಿಲ್ಲ. ದಿ.8.7.2013ರಂದು ಪುನ: ತಾಲ್ಲೂಕು ಪಂಚಾಯತಿಗೆ ದೂರುದಾರರು ಖಾತೆ ಮಾಡಲು ಅರ್ಜಿ ಸಲ್ಲಿಸಿದ್ದು, ಆ ವೇಳೆಯಲ್ಲಿ ಎನ್. ನಾಗರಾಜು ತಂದೆ ನಂಜುಂಡಶೆಟ್ಟಿ ಇವರು ತಕರಾರು ಸಲ್ಲಿಸಿರುತ್ತಾರೆ. ತಾಲ್ಲೂಕು ಪಂಚಾಯತಿಯಿಂದ ಪುನ: ಗ್ರಾಮಪಂಚಾಯತಿಗೆ ಅರ್ಜಿ ರವಾನೆಯಾಗಿದ್ದು, ಅಲ್ಲಿ ಪರಿಶೀಲಿಸಿದಾಗ ದೂರುದಾರರು ನೀಡಿರುವ ಸ್ವತ್ತಿನ ಸಂಖ್ಯೆಯಲ್ಲಿ ಸಾರ್ವಜನಿಕರು ಕುಡಿಯುವ ನೀರಿನ ಟ್ಯಾಂಕ್ ಇದ್ದು, ಅದರ ಅಳತೆಯು ತಾಳೆಯಾಗುವುದಿಲ್ಲ. ಆಗ ದಿ.8.11.2013ರಂದು ನಿವೇಶನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸುವಂತೆ ಹಿಂಬರಹ ನೀಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಖಾನೆಷುಮಾರಿ ನಂ..86/88 ಇದರ ಬಗ್ಗೆ ಆರ್.ಎ.85/50-51 ಸಿವಿಲ್ ನ್ಯಾಯಾಲಯದಲ್ಲಿ ದಾಖಲೆಯಾಗಿ ಅದರಲ್ಲಿ ಮೇಲ್ಮನವಿದಾರರಾದ ನಾಗಪ್ಪ ಅವರ ಮೇಲ್ಮನವಿಯು ವಜಾಗೊಂಡಿರುತ್ತದೆ. ಈ ಮೇಲ್ಮನವಿಯಲ್ಲಿ ದೂರುದಾರರ ತಾತ ಲಿಂಗಯ್ಯನವರು ಎದುರುದಾರರಾಗಿರುತ್ತಾರೆ.

6. ದೂರುದಾರರು ಹಾಜರುಪಡಿಸಿದ ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣಪತ್ರ 1947 ರಿಂದ 2006ರವರೆಗೆ ಉಪನೋಂದಣಾಧಿಕಾರಿಗಳು ನೀಡಿರುತ್ತಾರೆ. ದೂರುದಾರರು ಸಲ್ಲಿಸಿರುವ ಋಣಭಾರ ರಾಹಿತ್ಯ ಪ್ರಮಾಣಪತ್ರ, ನ್ಯಾಯಾಲಯದ ತೀರ್ಪು, 1947ನೇ ಸಾಲಿನ ಕಂದಾಯಗಳ ಪಟ್ಟಿ, ಇವುಗಳು ದೂರುದಾರರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ಅವಶ್ಯಕ ದಾಖಲೆಗಳೆಂದು ಕಂಡುಬರುತ್ತದೆ. ಆದರೆ ಎದುರುದಾರರು ಈ ದಾಖಲೆಗಳಲ್ಲದೆ ಇನ್ನೂ ಅವಶ್ಯಕ

ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದು ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಆದರೆ ಎದುರುದಾರರ ಪ್ರಕಾರ ಸಂಬಂದಪಟ್ಟ ದಾಖಲೆಗಳು ಯಾವುವು ಎಂದು ಹೇಳಿರುವುದಿಲ್ಲ. ಎದುರುದಾರರು ಉದ್ದೇಶಪೂರ್ವಕವಾಗಿ ದೂರುದಾರರಿಗೆ ಸಂದಿಗ್ಧ ಹಿಂಬರಹ ನೀಡಿದ್ದಾರೆಂದು ಕಂಡುಬರುತ್ತದೆ.

7. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ತಿಳಿಸಿರುವಂತೆ ಎದುರುದಾರರು ಖಾಸಾ ಸಹೋದರರಾಗಿದ್ದು, 2ನೇ ಎದುರುದಾರರು ಒಂದೇ ಪಂಚಾಯತಿಯಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆಂದು ಹೇಳಿರುತ್ತಾರೆ. ದೂರುದಾರರು ತಮ್ಮ ಆಸ್ತಿಯ ಬಗ್ಗೆ 1947ರಿಂದ ದಾಖಲೆಗಳನ್ನು ಹೊಂದಿದ್ದು, ಇಷ್ಟಾದರೂ ಸಹಾ ಎದುರುದಾರರು ಯಾವುದೇ ಒಂದು ಕಾರಣ ನೀಡಿ ಪೌತಿ ಖಾತೆ ಮಾಡದೆ ನಿರ್ಲಕ್ಷಮಾಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಆದ್ದರಿಂದ ತಿಪಟೂರು ತಾಲ್ಲೂಕು ಹೊಸಹಳ್ಳಿ ಗ್ರಾಮದ ಖಾನೆಷುಮಾರಿ ನಂ.86/88 ಸ್ವತ್ತನ್ನು ದೂರುದಾರರ ಹೆಸರಿಗೆ ಪೌತಿ ವಾರಸು ಖಾತೆ ಮಾಡಿಕೊಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ.12(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18/2/17

**[ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,ಬೆಂಗಳೂರು.**